**ದಿನಾಂಕಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

3. ನಾನು 7ನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಗಂಡ ಮೃತಪಟ್ಟ ನಂತರ ನಾನು 5-6 ಬಾರಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋದಾಗ ನನ್ನ ಜೊತೆ ನನ್ನ ಮಗ ಹಾಗೂ ನನ್ನ ತಂಗಿ ಸಹ ಹಾಜರಿದ್ದರು. ನಾನು ಪೊಲೀಸರಲ್ಲಿ ಹೇಳಿಕೆ ನೀಡಿದ ದಿನಾಂಕವನ್ನು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ನನ್ನ ಮಗ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಕಾಲದಲ್ಲಿ ನಾನು ನನ್ನ ಮಗನ ಜೊತೆ ಪೊಲೀಸ್ ಠಾಣೆಗೆ ಹೋಗಿರಲಿಲ್ಲ. ದಿಃ17.01.2023 ರಂದು ನನ್ನ ಮಗ ಪೊಲೀಸರಲ್ಲಿ ದೂರು ದಾಖಲಿಸಿರುತ್ತಾನೆ. ನನ್ನ ಮಗ ಪೊಲೀಸರಲ್ಲಿ ದೂರು ದಾಖಲಿಸಲು ಹೋದಾಗ ನನ್ನ ಮಗನ ಜೊತೆ ಯಾರು ಠಾಣೆಗೆ ಹೋಗಿದ್ದರು ಎಂದು ನನಗೆ ತಿಳಿದಿಲ್ಲ. ನನ್ನ ಮಗ ಪೊಲೀಸರಲ್ಲಿ ದಾಖಲಿಸಿರುವ ದೂರಿನಲ್ಲಿ ಏನು ಬರೆದಿರುತ್ತಾನೆಂದು ನನಗೆ ತಿಳಿಸಿರುತ್ತಾನೆ. ನಾನು ಪೊಲೀಸ್ ಠಾಣೆಗೆ ಹೋದ ಕಾಲದಲ್ಲಿ ಎಷ್ಟು ಬಾರಿ ಸಹಿ ಮಾಡಿರುತ್ತೇನೆಂದು ನನಗೆ ನಿರ್ದಿಷ್ಟವಾಗಿ ನೆನಪಿಲ್ಲ. ನಾನು ಪೊಲೀಸರಲ್ಲಿ ಹೇಳಿಕೆ ನೀಡುವ ಪೂರ್ವದಲ್ಲಿ ಯಾವ ರೀತಿ ಹೇಳಿಕೆ ನೀಡಬೇಕು ಎನ್ನುವ ಬಗ್ಗೆ ನನ್ನ ಕುಟುಂಬದ ಸದಸ್ಯರ ಜೊತೆ ಮಾತುಕತೆ ನಡೆಸಿದ್ದೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಮೊದಲು ಬರವಣಿಗೆ ಮೂಲಕ ಬರೆದುಕೊಂಡು ನಂತರ ಟೈಪ್ ಮಾಡಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ನನ್ನ ಮುಂದೆಯೇ ಟೈಪ್

ಮಾಡಿರುತ್ತಾರೆ. ನಾನು ಅವಿದ್ಯಾವಂತೆಯಾದ ಕಾರಣ ಪೊಲೀಸರು ನನ್ನ ಹೇಳಿಕೆ ಬರೆದುಕೊಂಡ ನಂತರ ನಾನು ಅದನ್ನು ಓದಿ ತಿಳಿದುಕೊಂಡಿಲ್ಲ. ನನ್ನ ಮಗ ನೀಡಿದ ದೂರಿನಲ್ಲಿ ಏನು ಬರೆಸಬೇಕು ಎಂದು ನಾನು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಲ್ಲಿ ನೀಡಿರುವ ಹೇಳಿಕೆಯಲ್ಲಿ ಹೋಟೆಲ್ ಕಟ್ಟಡದ ಮಾಲೀಕರಾದ ನಾಗರಾಜು ರವರು ಕಿರುಕುಳ ನೀಡುತ್ತಿದ್ದರು ಎಂದು ತಿಳಿಸಿಲ್ಲ ಭಾಗ್ಯಮ್ಮರವರು ಕಿರುಕುಳ ನೀಡುತ್ತಿದ್ದರು ಎಂದು ತಿಳಿಸಿರುತ್ತೇನೆ. ಅಂಗಡಿ ಮಳಿಗೆಯನ್ನು ಖಾಲಿ ಮಾಡುವಂತೆ ಆರೋಪಿತೆ ನನ್ನ ಗಂಡನಿಗೆ ಕಿರುಕುಳ ನೀಡುತ್ತಿದ್ದರು ಎಂದು ನಾನು ಪೊಲೀಸರಲ್ಲಿ ನೀಡಿರುವ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ನನ್ನ ಗಂಡ ದುರ್ಗೇಶ್ ರವರು ಅಂಗಡಿಯ ಮುಂದೆ ಸಹ ವಿಷ ಕುಡಿದು ವಾಂತಿ ಮಾಡಲು ಪ್ರಾರಂಭಿಸಿದರು ಎಂದು ನಾನು ಪೊಲೀಸರಲ್ಲಿ ನೀಡಿರುವ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಈ ಬಗ್ಗೆ ನಾನು ಪೊಲೀಸರಲ್ಲಿ ನೀಡಿರುವ ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆಂದರೆ ಸರಿಯಲ್ಲ.

4. ನನ್ನ ಮಗ ದಾಖಲಿಸಿರುವ ದೂರಿನಲ್ಲಿ ಏನು ಬರೆದಿದೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ. ನಮ್ಮ ಅಂಗಡಿಯ ಅಕ್ಕಪಕ್ಕ ಬೇರೆ ವಾಸದ ಮನೆಗಳು ಇರುತ್ತವೆಂದರೆ ಸರಿಯಲ್ಲ ಅಂಗಡಿಯ ಹಿಂದೆ ವಾಸದ ಮನೆಗಳು ಇರುತ್ತವೆ. ನಮ್ಮ ಅಂಗಡಿಯ ಎಷ್ಟು ಅಡಿ ಹಿಂದೆ ವಾಸದ ಮನೆಗಳು ಇರುತ್ತವೆಂದು ನನಗೆ ನಿರ್ದಿಷ್ಟವಾಗಿ ಅಂತರ ತಿಳಿದಿಲ್ಲ. ನನ್ನ ಗಂಡ ಶ್ರೀ ದುರ್ಗಾ ಪೋರ್ಕ್ ಸ್ಟಾಲ್ ಎಂಬ ಹೆಸರಿನಲ್ಲಿ ಅಂಗಡಿ ನಡೆಸುತ್ತಿದ್ದರು. ನನ್ನ ಗಂಡ ನಡೆಸುತ್ತಿದ್ದ ಅಂಗಡಿಯಿಂದ ಆರೋಪಿತೆಯ ಮನೆ ಕಾಣಿಸುತ್ತದೆ ಎಂದರೆ ಸರಿ. ನನ್ನ ಗಂಡ

ಅಂಗಡಿಯ ಮುಂದೆ ವಿಷ ಸೇವಿಸಿದಾಗ ಅಂಗಡಿಯಲ್ಲಿ ನಾನು ನನ್ನ ಮಗ, ಆಳ್ವ ಎಸ್ಟೇಟಿನ ಸುರೇಶ ಆಳ್ವ ಇದ್ದರು. ಆ ಸಮಯದಲ್ಲಿ ಅಂಗಡಿಯ ಗಿರಾಕಿಗಳು ಇದ್ದರು ಎಂದರೆ ತುಂಬಾ ಜನರು ಇದ್ದರು. ನನ್ನ ಬಳಿ ಮೊಬೈಲ್ ಫೋನು ಇರುತ್ತದೆ. ನನ್ನ ಮಕ್ಕಳ ಬಳಿ ಸಹ ಮೊಬೈಲ್ ಫೋನ್ ಇರುತ್ತದೆ. ನನ್ನ ಗಂಡ ವಿಷ ಕುಡಿಯುವ ಮೊದಲು ಅಂಗಡಿಯಲ್ಲಿ ಕುಳಿತು ಆತನಿಗೆ ಆರೋಪಿತೆಯಿಂದ ಆಗುತ್ತಿರುವ ಕಿರುಕುಳದ ಬಗ್ಗೆ ಮೊಬೈಲ್ ನಲ್ಲಿ ವೀಡಿಯೋ ರೆಕಾರ್ಡ್ ಮಾಡಿರುತ್ತಾರೆ. ನಾನು ನನ್ನ ಗಂಡನ ಮೊಬೈಲ್ ಫೋನನ್ನು ಪೊಲೀಸರಿಗೆ ನೀಡಿಲ್ಲ. ನನ್ನ ಗಂಡ ನನಗೆ ಫೋನ್ ಮಾಡಿ ಆರೋಪಿತೆಯಿಂದ ಕಿರುಕುಳ ಆಗಿರುವ ಬಗ್ಗೆ ತಿಳಿಸಿರುತ್ತಾರೆ ಎನ್ನುವ ಬಗ್ಗೆ ನಾನು ಪೊಲೀಸರರಿಗೆ ನನ್ನ ಫೋನ್ ಕಾಲ್ ರಿಜಿಸ್ಟರ್ ನೀಡಿಲ್ಲ. ನಾನು ಗಾಬರಿಯಲ್ಲಿದ್ದ ಕಾರಣದಿಂದ ಕಾಲ್ ರಿಜಿಸ್ಟರ್ ನೀಡಿಲ್ಲ. ಈ ಬಗ್ಗೆ ಪೊಲೀಸರು ಕಾಲ್ ರಿಜಿಸ್ಟರ್ ನೀಡುವಂತೆ ನನಗೆ ಕೇಳಿಲ್ಲ. ಸಾಕ್ಷಿದಾರರು ಮುಂದುವರಿದ ತನ್ನ ಗಂಡನ ಮೊಬೈಲ್ ಕಾಲ್ ರೆಕಾರ್ಡಿಂಗ್ ಬಗ್ಗೆ ಪೊಲೀಸರ ಹೇಳಿಕೆ ಮೇರೆಗೆ ತಾನು ಸಿ ಡಿ ಮಾಡಿಸಿ ಪೊಲೀಸರಿಗೆ ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನ್ನ ಗಂಡ ಮೊಬೈಲ್ ನಲ್ಲಿ ವೀಡಿಯೋ ರೆಕಾರ್ಡಿಂಗ್ ಮಾಡಿರುವ ಬಗ್ಗೆ ನನ್ನ ಗಂಡ ಮೃತಪಟ್ಟ ನಂತರ ನಾವು ಕೇಸ್ ದಾಖಲಿಸುವ ಕಾಲದಲ್ಲಿ ಪೊಲೀಸರಿಗೆ ಈ ಬಗ್ಗೆ ಮಾಹಿತಿ ನೀಡಿರುತ್ತೇವೆ. ಈ ಬಗ್ಗೆ ಪೊಲೀಸರಿಗೆ ನಾನು ಹಾಗೂ ನನ್ನ ಮಗ ತಿಳಿಸಿರುತ್ತೇವೆ. ನಾನು ಪೊಲೀಸರಲ್ಲಿ ನೀಡಿರುವ ಹೇಳಿಕೆಯಲ್ಲಿ ನಾಲ್ಕು ತಿಂಗಳಿನಿಂದ ಅಂಗಡಿಯ ಮಾಲೀಕರಾದ ನಾಗರಾಜುರವರ ಹೆಂಡತಿಯಾದ ಆರೋಪಿತೆ ಭಾಗ್ಯ ರವರು ಅಂಗಡಿ ಖಾಲಿ ಮಾಡುವಂತೆ ನನ್ನ ಗಂಡನಿಗೆ ಕಿರುಕುಳ ನೀಡುತ್ತಿದ್ದರು ಎಂದು ನಾನು ತಿಳಿಸಿರುತ್ತೇನೆಂದರೆ ಸರಿ. ಯಾವ ತಾರೀಖಿನಿಂದ

ಆರೋಪಿತೆ ನನ್ನ ಗಂಡನಿಗೆ ಅಂಗಡಿ ಖಾಲಿ ಮಾಡುವಂತೆ ಕಿರುಕುಳ ನೀಡುತ್ತಿದ್ದರು ಎಂದು ನನಗೆ ದಿನಾಂಕ ನಿರ್ದಿಷ್ಟವಾಗಿ ತಿಳಿದಿಲ್ಲ. ಆರೋಪಿತೆ ತನಗೆ ಅವಾಚ್ಯ ಶಬ್ದಗಳಿಂದ ಬೈದು ಅಪಮಾನಗೊಳಿಸಿದರು ಎನ್ನುವ ವಬಗ್ಗೆ ನನ್ನ ಗಂಡ ನನಗೆ ಮೊಬೈಲ್ ಫೋನ್ ಮೂಲಕ ತಿಳಿಸಿದ್ದು ಅದನ್ನು ನಾನು ರೆಕಾರ್ಡ್ ಮಾಡಿಕೊಂಡಿಲ್ಲ. ನನ್ನ ಗಂಡನಿಗೆ ಆರೋಪಿತೆ ಭಾಗ್ಯ ಅವಾಚ್ಯ ಶಬ್ದಗಳಿಂದ ಬೈದು ಅಪಮಾನಗೊಳಿಸಿರುವ ಬಗ್ಗೆ ನನ್ನ ಗಂಡ ನನಗೆ ತಿಳಿಸಿದಾಗ ನನ್ನ ಗಂಡನಿಗೆ ಆರೋಪಿತೆ ಬೈದಿರುವುದು ತಪ್ಪೆಂದು ನನಗೆ ಅನಿಸಿತು ಎಂದರೆ ಸರಿ. ನನ್ನ ಗಂಡ ಆರೋಪಿತೆಯ ಕಿರುಕುಳದ ಬಗ್ಗೆ ನನಗೆ ಫೋನ್ ಮಾಡಿ ತಿಳಿಸಿದ ಸ್ವಲ್ಪ ಸಮಯದಲ್ಲಿಯೇ ನನ್ನ ಗಂಡ ವಿಷ ಸೇವಿಸಿದ್ದ ಕಾರಣದಿಂದ ನನ್ನ ಗಂಡ ನನಗೆ ತಿಳಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನನಗೆ ಕೂಡಲೇ ಪೊಲೀಸರಲ್ಲಿ ದೂರು ದಾಖಲಿಸಲು ಸಾಧ್ಯ ಆಗಲಿಲ್ಲ. ಆರೋಪಿತೆ ನನ್ನ ಗಂಡನಿಗೆ ನಾನು ತಿಳಿಸಿರುವಂತೆ ಅವಾಚ್ಯ ಶಬ್ದಗಳಿಂದ ಬೈದಿದ್ದೇ ಆಗಿದ್ದಲ್ಲಿ ನಾನು ಪೊಲೀಸರಲ್ಲಿ ಕೂಡಲೇ ದೂರು ದಾಖಲಿಸುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿ ನನ್ನ ಗಂಡನಿಗೆ ಯಾವುದೇ ವಿಚಾರ ಹೇಳದಿದ್ದರೂ ಸಹ ಪ್ರಕರಣಕ್ಕಾಗಿ ಆ ವಿಚಾರಗಳನ್ನು ನಾನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ನನ್ನ ಗಂಡ ಸಕಲೇಶಪುರದ ಒಂದು ಎಸ್ಟೇಟಿನ ಬಳಿ ಅರ್ಧ ವಿಷ ಕುಡಿದಿದ್ದು ಆನಂತರ ಅಂಗಡಿಯ ಬಳಿ ಬಂದು ಅಲ್ಲೂ ಸಹ ವಿಷ ಕುಡಿದಿರುತ್ತಾರೆ. ಸಕಲೇಶಪುರದ ಎಸ್ಟೇಟ್ ಬಳಿ ನನ್ನ ಗಂಡ ವಿಷ ಸೇವಿಸಿದ ಜಾಗಕ್ಕೆ ನಾನು ಪೊಲೀಸರನ್ನು ಕರೆದುಕೊಂಡು ಹೋಗಿಲ್ಲ. ನನ್ನ ಗಂಡ ನನಗೆ ಫೋನ್ ಮಾಡಿ ಆರೋಪಿತೆಯ ಕಿರುಕುಳದ ಬಗ್ಗೆ ತಿಳಿಸಿದಾಗ ನಾನು ಹಾಸನದಲ್ಲಿ ಇದ್ದೆ. ಆಗ ನಮ್ಮ ಮನೆಯಲ್ಲಿ ನಾನು ಒಬ್ಬಳೇ ಇದ್ದೆ. ನಾನು ಮಧ್ಯಾಹ್ನ 3.30 ರಿಂದ 4 ಗಂಟೆ ಸಮಯಕ್ಕೆ

ಹೊರಟು ಸಂಜೆ 6 ಗಂಟೆ ಸಮಯಕ್ಕೆ ಅಂಗಡಿಯ ಬಳಿ ಬಂದಿರುತ್ತೇನೆ. ನಾನು ಸಂಜೆ 6 ಗಂಟೆ ಸಮಯಕ್ಕೆ ಅಂಗಡಿಯ ಬಳಿ ಬಂದಾಗ ನನ್ನ ಗಂಡ ಬೇಜಾರು ಮಾಡಿಕೂಂಡು ಕುಳಿತಿದ್ದು ಈ ಬಗ್ಗೆ ನಾನು ನನ್ನ ಗಂಡನನ್ನು ವಿಚಾರಿಸಲಾಗಿ ಅವರು ಆಗಲೂ ಸಹ ನನಗೆ ಆರೋಪಿತೆಯ ಕಿರುಕುಳದ ಬಗ್ಗೆ ತಿಳಿಸಿದರು. ಆರೋಪಿತೆ ಹಾಗೂ ನಿಮ್ಮ ಗಂಡನ ನಡುವೆ ಗಲಾಟೆ ಎಷ್ಟು ಗಂಟೆ ಸಮಯಕ್ಕೆ ಆಗಿರುತ್ತದೆ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ಎಷ್ಟು ಗಂಟೆ ಸಮಯಕ್ಕೆ ಗಲಾಟೆಯಾಯಿತು ಎಂದು ನನ್ನ ಗಂಡ ನನಗೆ ತಿಳಿಸಿಲ್ಲ ಆದರೆ ಗಲಾಟೆಯ ಬಗ್ಗೆ ಮಧ್ಯಾಹ್ನ 3 ಗಂಟೆ ಸಮಯಕ್ಕೆ ಫೋನ್ ಮಾಡಿ ತಿಳಿಸಿದ್ದರು ಎಂದು ಉತ್ತರಿಸುತ್ತಾರೆ.

5. ನನ್ನ ಗಂಡ ಮೋಟಾರು ಬೈಕಿನಲ್ಲಿ ಸಕಲೇಶಪುರಕ್ಕೆ ಹೋದರು. ಸಂಜೆ ಸುಮಾರು 7 ಗಂಟೆ ಸಮಯಕ್ಕೆ ನನ್ನ ಗಂಡ ಸಕಲೇಶಪುರಕ್ಕೆ ಹೋಗಿ ಅಂಗಡಿಯ ಬಳಿ ವಾಪಸ್ ಬಂದಿರುತ್ತಾರೆ. ನಾನು ಈ ಸಮಯದ ನಡುವೆ ನನ್ನ ಗಂಡನಿಗೆ ಫೋನ್ ಮಾಡಿ ತಿಳಿಸಿದ್ದು ನನ್ನ ಗಂಡ ಸಕಲೇಶಪುರದಿಂದ ಅಂಗಡಿಯ ಬಳಿ ವಾಪಸ್ ಬರುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ನನ್ನ ಗಂಡ ಸಕಲೇಶಪುರದಿಂದ ಬೈಕನ್ನು ಚಾಲನೆ ಮಾಡಿಕೊಂಡು ಅಂಗಡಿಯ ಬಳಿ ಬಂದು ಬೈಕಿನಿಂದ ಬಿದ್ದಿರುತ್ತಾರೆ. ನನ್ನ ಗಂಡ ಅಂಗಡಿಯ ಬಳಿ ಮತ್ತೆ ವಿಷ ಕುಡಿದು ವಾಂತಿ ಮಾಡುತ್ತಿದ್ದುದುನ್ನು ನಾನು ಪ್ರತ್ಯಕ್ಷವಾಗಿ ನೋಡಿ ತಪ್ಪಿಸುವ ವಿಫಲ ಪ್ರಯತ್ನ ಮಾಡಿರುತ್ತೇನೆ. ನನ್ನ ಗಂಡ ನಾನು ತಿಳಿಸಿರುವಂತೆ ಅಂಗಡಿಯ ಮುಂದೆ ಯಾವುದೇ ವಿಷ ಸೇವನೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನನ್ನು ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಸಮಯ ಎಷ್ಟಾಗಿತ್ತು ಎಂದು

ಗಾಬರಿಯಲ್ಲಿದ್ದ ನನಗೆ ನೆನಪಿಲ್ಲ. ನಾನು ಸಕಲೇಶಪುರ ಸರ್ಕಾರಿ ಆಸ್ಪತ್ರೆಯ ವೈದ್ಯರನ್ನು ಭೇಟಿಯಾಗಿ ಮಾತನಾಡಿಸಿಲ್ಲ. ಸಕಲೇಶಪುರ ಸರ್ಕಾರಿ ಆಸ್ಪತ್ರೆಯ ವೈದ್ಯರಲ್ಲಿ ನನ್ನ ಗಂಡ ಯಾವ ಕಾರಣಕ್ಕಾಗಿ ವಿಷ ಸೇವನೆ ಮಾಡಿದರು ಎಂದು ತಿಳಿಸಿಲ್ಲ. ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಸಹ ನನ್ನ ಗಂಡ ಯಾವ ಕಾರಣಕ್ಕಾಗಿ ವಿಷ ಸೇವಿಸಿದರು ಎಂದು ನಾನು ವೈದ್ಯರಲ್ಲಿ ತಿಳಿಸಿಲ್ಲ. ನಾನು ಹಾಸನದ ಮಂಗಳಾ ಆಸ್ಪತ್ರೆಯಲ್ಲಿ ಸಹ ವೈದ್ಯರಲ್ಲಿ ನನ್ನ ಗಂಡ ಯಾವ ಕಾರಣಕ್ಕಾಗಿ ವಿಷ ಸೇವನೆ ಮಾಡಿದರು ಎಂದು ತಿಳಿಸಿಲ್ಲ. ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ನನ್ನ ಗಂಡನನ್ನು ಕರೆದುಕೊಂಡು ಹೋದ ಕಾಲದಲ್ಲಿ ನನ್ನ ಗಂಡ ಯಾವ ಕಾರಣಕ್ಕಾಗಿ ವಿಷ ಸೇವನೆ ಮಾಡಿದರು ಎಂದು ವೈದ್ಯರಲ್ಲಿ ತಿಳಿಸಿರುತ್ತೇವೆ. ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವಾಗ ನನ್ನ ಗಂಡ ವಿಷ ಕುಡಿಯಲು ಕಾರಣವನ್ನು ನಾವು ವೈದ್ಯರಿಗೆ ತಿಳಿಸಿದ್ದೆವು ಎನ್ನುವ ಬಗ್ಗೆ ನಾನು ಪೊಲೀಸರಲ್ಲಿ ತಿಳಿಸಿರುತ್ತೇನೆ. ಫಾದರ್ ಮುಲ್ಲರ್ ಆಸ್ಪತ್ರೆಗೆ ಸಕಲೇಶಪುರದ ಪೊಲೀಸರು ಬಂದಿದ್ದು ನನಗೆ ಪೊಲೀಸ್ ಅಧಿಕಾರಿಯ ಹೆಸರು ತಿಳಿದಿಲ್ಲ. ಫಾದರ್ ಮುಲ್ಲರ್ ಆಸ್ಪತ್ರೆಗೆ ಬಂದ ಪೊಲೀಸರು ಅಲ್ಲಿ ಬರವಣಿಗೆ ಮಾಡಿಕೊಂಡಿರುತ್ತಾರೆ. ಈಗ ನೋಡುತ್ತಿರುವ ದಾಖಲಾತಿ ನನ್ನ ಗಂಡ ಮಂಗಳಾ ಆಸ್ಪತ್ರೆಯಲ್ಲಿ ವೈದ್ಯರ ಸಮಕ್ಷಮ ಪೊಲೀಸರಲ್ಲಿ ನೀಡಿದ ಹೇಳಿಕೆ ಆಗಿರುತ್ತದೆ ಎಂದರೆ ಸರಿ. ವಕೀಲರು ಸಾಕ್ಷಿದಾರರಿಗೆ ತೋರಿಸಿ ಸಾಕ್ಷಿದಾರರು ಗುರುತಿಸಿದ ಮೃತ ದುರ್ಗೇಶ್ ರವರದು ಎನ್ನಲಾದ ಹೇಳಿಕೆಯನ್ನು ನಿಡಿ–1 ಎಂದು ಗುರುತಿಸಲಾಯಿತು. ನಿಡಿ–1 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಗಂಡ ದುರ್ಗೇಶ್ ರವರ ಸಹಿಯನ್ನು ನಿಡಿ–1(ಎ) ಎಂದು ಗುರುತಿಸಲಾಯಿತು.

6. ಮಂಗಳಾ ಆಸ್ಪತ್ರೆಯಲ್ಲಿ ನನ್ನ ಗಂಡ 12 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ನನ್ನ ಗಂಡ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ 5 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ನನ್ನ ಗಂಡ ಮಂಗಳಾ ಆಸ್ಪತ್ರೆಯಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ದಿಃ05.01.2023 ರಂದು ನನ್ನ ಗಂಡ ಪೊಲೀಸರಲ್ಲಿ ಹೇಳಿಕೆ ನೀಡಿದಾಗ ಬೇರೆ ಯಾರು ಹಾಜರಿದ್ದರು ಎಂದು ನನಗೆ ತಿಳಿದಿಲ್ಲ. ದಿಃ05.01.2023 ರಂದು ನನ್ನ ಗಂಡ ಪೊಲೀಸರಲ್ಲಿ ನೀಡಿರುವ ಹೇಳಿಕೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ಮದ್ಯ ಸೇವನೆ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಗಂಡ ಹಾಸನದಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನನ್ನ ಗಂಡ ಮೃತಪಡುವ ಎರಡು ತಿಂಗಳ ಹಿಂದೆ ಸಹ ಸಂತೆಪೇಟೆಯ ಬಳಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದರು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದಿನ ಪಾಟಿ ಸವಾಲನ್ನು ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.